

ಮಾತ್ರ ನಾವು ಭರಿಸುತ್ತೇವೆ’ ಎಂದು ಬರೆದು ಪತ್ರ ಮುಕ್ತಾಯಗೊಳಿಸಿದ್ದರು.

ಅವರು ಆರ್ಥಿಕ ಸಂಕಷ್ಟದಲ್ಲಿದ್ದಾರೆ ಎಂಬುದು ಬರೀ ಸುಳ್ಳು ಅಂತ ನನಗೆ ಗೊತ್ತಿದೆ. ನನಗೆ ಆ ಪತ್ರದ ಹಿಂಭಾಗದ ಷರಾ ಓದಿ ಅಣ್ಣಂದಿರ ಅಸಹ್ಯ ವರ್ತನೆಯ ಬಗ್ಗೆ ಖೇದವಾಯಿತು.

ನಾನು ಇಲ್ಲಿ ಆರಾಮವಾಗಿ ಬದುಕಿದ್ದೇನಾ? ಏನೂ ಖರ್ಚು ಮಾಡಿಲ್ಲವೇ...? ಕೇವಲ ಪರ್ಸು ಭರ್ತಿ ಮಾಡಿಕೊಳ್ಳುವ ಸಲುವಾಗಿ ಅಪ್ಪನ ಜೊತೆಗಿದ್ದು ಕೆಲಸ ಮಾಡುತ್ತಿದ್ದೇನೆಯೇ? ನಾನು ಇದುವರೆಗೆ ಮಾಡಿದ ಕೆಲಸಕ್ಕೆ ಏನೂ ಬೆಲೆಯಿಲ್ಲವೇ...? 40 ವರ್ಷಗಳ ಕಾಲ ಅಪ್ಪನ ಜೊತೆಯಲ್ಲೇ ಇದ್ದು ಮದುವೆಯನ್ನೂ ಆಗದೇ, ಅವನನ್ನು ತೊಳೆದು, ಬಳಿದು ಮಾಡಿದ್ದಕ್ಕೆ ನನಗೆ ಸಿಕ್ಕಿದ್ದು ಇದೇ ಬಹುಮಾನವೇ...? ಇಷ್ಟಾಗಿ ಇಲ್ಲಿ ನಾನು ಗಳಿಸಿದ್ದರಾದರೂ ಏನು? ಬರೀ ಸಾಲ ಸೋಲ.

ನನ್ನ ಜೇಬಲ್ಲಿದ್ದ ಹಣವಾದರೂ ಎಷ್ಟು? ಪ್ಯಾಂಟು ಜೇಬಿಗೆ ಕೈ ಹಾಕಿ ನೋಡಿದೆ. ಜೇಬಲ್ಲಿರುವ ಬೆಂಗಳೂರು ಬಸ್ ಟಿಕೆಟ್ ಬಿಟ್ಟರೆ ಬಸ್ ಸ್ಟಾಂಡ್‌ನಿಂದ ಕುಮಾರಸ್ವಾಮಿ ಲೇಔಟ್‌ಗೆ ತಲುಪಬಹುದಾದಷ್ಟು ಆಟೊ ಚಾರ್ಜ್ ಮಾತ್ರ ಇದೆ. ಬ್ಯಾಂಕ್ ಬ್ಯಾಲೆನ್ಸ್ ಸೊನ್ನೆ. ನಾನು ಬೆಂಗಳೂರಿಗೆ ಹೊರಟಿದ್ದಾದರೂ ಅಣ್ಣಂದಿರ ಆರ್ಥಿಕ ಸಹಕಾರದ ದೃಷ್ಟಿಯಿಂದ. ತಲೆ ಮೇಲೆ ಕೈ ಇಟ್ಟುಕೊಂಡು ಯೋಚಿಸಲಾರಂಭಿಸಿದೆ.

ಈಗಾಗಲೇ ಸಾಕಷ್ಟು ಸಾಲ ನನ್ನ ಮೇಲಿದೆ. ಸಾಲ ಮಾಡಿ ಚಿಕಿತ್ಸೆ ಕೊಡಿಸುವುದಕ್ಕೊಂದು ಅರ್ಥವಿದೆ. ಆದರೆ ಮತ್ತೂ ಸಾಲ ಮಾಡಿ ವೈಕುಂಠಕ್ಕೆ ಸೇರಿಸುವುದೆಂದರೆ...? ಅರ್ಥಹೀನ. ಅಂತಹ ಪುಣ್ಯಗಳಿಕೆ ನನಗೆ ಬೇಡವೇ ಬೇಡ... ನಾನಂತೂ ನಿಸ್ವಾರ್ಥ ಮನೋಭಾವದಿಂದ ನನ್ನ ಕೈಲಾದ ಮಟ್ಟಿಗೆ ಅಪ್ಪನ ಸೇವೆ ಮಾಡಿದ್ದೇನೆ. ಅಪ್ಪನ ಶವವನ್ನು ಹಾದಿಬೀದಿಯಲ್ಲೇನೂ ಬಿಟ್ಟಿಲ್ಲ. ಚಿತಾಭಸ್ಮ ಮಾಡುವ ಮೂಲಕ ಭೌತಿಕ ಕ್ರಿಯೆ ಪೂರೈಸಿದ್ದೇನೆ. ದುಡ್ಡು ಖರ್ಚು ಮಾಡಿದರೆ ಮಾತ್ರ ‘ವೈಕುಂಠ’ವೇ...? ಮನಸ್ಸು ವಿಹ್ವಲಗೊಂಡಿತು.

ಕಂಡಕ್ಟರ್ ವಿಷಲ್ ಊದಿದ. ಬಸ್ಸು ಹತ್ತಲು ಒಂದು ಕಾಲು ಮೇಲಿಟ್ಟಿದ್ದೆ. ಅಷ್ಟರಲ್ಲಿ ಒಬ್ಬ ವ್ಯಕ್ತಿ ಓಡೋಡಿ ಬಂದು ‘ಇದು ಬೆಂಗಳೂರಿಗೆ ಹೋಗುವ ಬಸ್ಸಾ...?. ಅರ್ಜೆಂಟ್ ಒಂದು ಸೀಟು ಬೇಕಾಗಿತ್ತು ಇದೆಯಾ’ ಅಂತ ಕೇಳಿದ. ಕಂಡಕ್ಟರ್ ‘ಒಂದೂ ಸೀಟ್ ಇಲ್ಲ ಸಾರ್’ ಎಂದ.

ನಾನು ತಕ್ಷಣ ನನ್ನ ಕಾಲು ಕೆಳಗಿಳಿಸಿ ‘ನನ್ನ ಒಂದು ಸೀಟ್ ಖಾಲಿ ಇದೆ. ನೀವು ಹತ್ತಿ’ ಎಂದೆ. ‘ಯಾಕೆ ನೀವು ಬೆಂಗಳೂರಿಗೆ ಹೋಗುವುದಿಲ್ಲವೇನು’ ಎಂದವರು ಕೇಳಿದರು. ‘ಇಲ್ಲ ನಾನು ಮರಳಿ ನನ್ನೂರಿಗೇ ಹೋಗುತ್ತೇನೆ. ಈ ಟಿಕೆಟ್ ನೀವೇ ಇಟ್ಟುಕೊಳ್ಳಿ’ ಎಂದು ಅವನ ಜೇಬಿಗೆ ಬಲವಂತವಾಗಿ ತುರುಕಿದೆ.

ನನ್ನನ್ನು ಕೆಳಗೆ ಬಿಟ್ಟು ಬಸ್ಸು ಆ ಹೊಸಬನನ್ನು ಹತ್ತಿಸಿಕೊಂಡು ಬರ್ರನೆ ಮುಂದೆ ಹೋಗಿಬಿಟ್ಟಿತು.

ಅಣ್ಣಂದಿರು ಬರೆದ ಪತ್ರ ಕೈಯಲ್ಲಿತ್ತು. ಕೋಪದಿಂದ ಅದನ್ನು ಹರಿದು ಚೂರು ಚೂರು ಮಾಡಿದೆ. ಅಪ್ಪನನ್ನು ವೈಕುಂಠಕ್ಕೆ ಸೇರಿಸುವ ಮರಣೋತ್ತರ ಪುಣ್ಯ ಸಿಕ್ಕರೆ ಅವರಿಗೇ ಸಿಗಲಿ... ನನಗೆ ಬೇಡ. ನಿರ್ವಂಚನೆಯಿಂದ ಮಾಡಿದ ಭೌತಿಕ ಕ್ರಿಯೆಯ ಆತ್ಮತೃಪ್ತಿಯೇ ನನಗೆ ಸಾಕು. ಬೇರೆ ಪುಣ್ಯ ಬೇಡ’ ಎಂದು ಮನಸ್ಸಿನಲ್ಲಿಯೇ ಅಂದುಕೊಂಡು ಆ ಚೂರುಗಳನ್ನೆಲ್ಲ ಆಕಾಶದ ಕಡೆ ಎಸೆದು, ಆ ಕತ್ತಲೆಯ ನಡುರಾತ್ರಿಯಲ್ಲಿ ಕಪ್ಪು ಟಾರ್ ರಸ್ತೆಯ ಮೇಲೆ, ನನ್ನೂರಿಗೆ ಮರಳುವ ಬಸ್ಸಿಗಾಗಿ ಕಾಯುತ್ತಾ ಒಬ್ಬನೇ ನಿಂತೆ.

ಪ್ರತಿಕ್ರಿಯಿಸಿ: feedback@sudha.co.in